ರಾಷ್ಟ್ರೀಯ ಉದ್ಯಾನವನದಲ್ಲಿ ಬರುವ ಬೋಳೇಗೌಡನಕಟ್ಟೆ ಹುಲಿ ಸಂರಕ್ಷಣಾ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆ ಅನುಮತಿ ನೀಡುವುದಿಲ್ಲ.

(ಈ) ಜಮಖಂಡಿನಗರದಲ್ಲಿನ ತಾಲ್ಲೂಕು ಖಜಾನೆ ಕಚೇರಿಯಲ್ಲಿ ಕಂಪ್ಯೂಟರ್ ಕೆಟ್ಟಿರುವ ಬಗ್ಗೆ.

ಶ್ರೀ ಶ್ರೀಕಾಂತ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಜಮಖಂಡಿನಗರದಲ್ಲಿನ, ತಾಲ್ಲೂಕಿ ಖಜಾನೆ ಕಚೇರಿಯಲ್ಲಿದ್ದಂಥ ಕಂಪ್ಯೂಟರ್ ಕಳೆದ 2–3 ತಿಂಗಳಿನಿಂದ ಕೆಲಸ ಮಾಡದೆ, ಪದೆ ಪದೆ ರಿಪೇರಿಗೆ ಬಂದು ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಸ್ಥಳೀಯ ಅಧಿಕಾರಿಗಳು, ಹಿರಿಯ ಅಧಿಕಾರಿಗಳ ಗಮನಕ್ಕೆ ತರುವ ಕೆಲಸವನ್ನು ಮಾಡಿಲ್ಲ. ಜಮಖಂಡಿ ವಿಧಾನ ಸಭಾಕ್ಷೇತ್ರದ ಸುಮಾರು 25,000 ಫಲಾನುಭವಿಗಳು wife ಇರಬಹುದು, widow pension ಇರಬಹುದು, ಸಂಧ್ಯಾಸುರಕ್ಷವಿರಬಹುದು, ಅಂಗವಿಕಲರ ಮಾಶಾಸನ ಇತ್ಯಾದಿ ದೊಡ್ಡ ಸಂಖ್ಯೆಯಲ್ಲಿರುವ ಫಲಾನುಭವಿಗಳಿಗೆ ಕಳೆದ ಮೂರು ತಿಂಗಳಿಂದ ಯಾವುದೆ ಪೇಮೆಂಟ್ ಆಗಿಲ್ಲ, ಇದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಇದನ್ನು ರಿಪೇರಿ ಅಥವಾ ತಕ್ಷಣ ಬದಲಾವಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರೇನು ಕಂಪ್ಯೂಟರ್ ಕೆಟ್ಟಿರುವ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೆ ಜರುಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇವೆ.

6. ವಿತ್ತೀಯ ಕಾರ್ಯಕಲಾಪಗಳು :

2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ :

ಶ್ರೀ ವಿ ಶ್ರೀನಿವಾಸ ಪ್ರಸಾದ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯನ್ನು ಕೂಡ ಹೊಂದಿರುವವರು ಈಗಾಗಲೆ ಸದನದ ಮುಂದೆ ಮಂಡಿಸಿದ್ದಾರೆ. ಬಹುಶಃ ಮಂಡಿಸುವ ಸಂದರ್ಭದಲ್ಲು ಕೂಡ ಸದನದ ಗಮನವನ್ನು ಕೂಡ ಸೆಳೆದಿದ್ದರು. 5ನೇ ಸಾರಿ ಸತತವಾಗಿ ಬಜೆಟ್